7

# ಪ್ರಶ್ನೆ:

# “ಹೊಸ ಒಡಂಬಡಿಕೆಯ ಸಭೆಯು ಯಾವಾಗ ಪ್ರಾರಂಭವಾಯಿತು?”

## ಉತ್ತರ:

ಬೈಬಲಿನ ಸಭೆಯ ಜನ್ಮದಿನಾಂಕವು ಅನೇಕ ಪ್ರಶ್ನೆಗಳಿಗೆ ಉತ್ತರ ಕೊಡುತ್ತದೆ. ಶಿಶುಗಳ, ಸದಸ್ಯತ್ವ, ಸಬ್ಬತ್ ದಿನವನ್ನು ಗೌರವಿಸುವುದು, ಧೂಪಸುಡುವುದು, ಯಾಂತ್ರಿಕ ಸಂಗೀತ, ಬಹು ಪತ್ನಿತ್ವ, ಸ್ನಾನಿಕನಾದ ಯೋಹಾನನ್ನು ಅನುಸರಿಸುವುದು, ಪಾದ ತೊಳೆಯುವುದು ಮತ್ತು ಶಿಲುಬೆಯ ಮೇಲಿನ ಕಳ್ಳನ ಉದಾಹರಣೆಯನ್ನು ಅನುಸರಿಸುವುದು - ಇವುಗಳ ಸರಿಯಾಗಿರುವಿಕೆ ಇಲ್ಲವೇ ತಪ್ಪಾಗಿರುವಿಕೆಯೊಂದಿಗೆ ಆ ದಿನಾಂಕವು ಸಂಬಂಧಿಸಿರುತ್ತದೆ.

### ಸಭೆಯು ದೇವರ ರಾಜ್ಯ

ಸಭೆಯ ಜನ್ಮ ದಿನವನ್ನು ಕಲಿತುಕೊಳ್ಳುವದರಲ್ಲಿ ಒಂದು ಮಹತ್ವದ ಸಂಗತಿಯು ಸಭೆಯು ರಾಜ್ಯದಂತೆಯೇ ಇರುತ್ತದೆ ಎಂಬುದು. “ಸಭೆ” ಎಂಬ ಪದವು ನೇರವಾಗಿ ಸಭೆಯ ಸದಸ್ಯರ ಹೊರಗೆ ಕರೆಯಲ್ಪಟ್ಟ ಗುಣವನ್ನು ತೋರಿಸುವಾಗ, “ರಾಜ್ಯ” ಎಂಬ ಪದವು ಸಭೆಯ ಆಡಳಿತೆಯನ್ನು ನೇರವಾಗಿ ತೋರಿಸುತ್ತದೆ, ಎರಡೂ ಪದಗಳು ಅದೇ ಸಂಸ್ಥೆಯನ್ನು ಸೂಚಿಸುತ್ತವೆ. ಈ ಸಂಗತಿಯು ಈ ಕೆಳಗಿನವುಗಳಲ್ಲಿ ಕಂಡು ಬರುತ್ತದೆ:

(1) ರಾಜ್ಯದ ಅರಸನು ಸಭೆಯ ಶಿರಸ್ಸಾಗಿದ್ದಾನೆ (ಕೊಲೊಸ್ಸೆ 1:13, 18).

(2) ರಾಜ್ಯದ ಬೀಜವು ಸಭೆಯ ಬೀಜವಾಗಿದೆ (ಲೂಕ 8:11; 1 ಥೆಸಲೊನೀಕ 2:13, 14).

(3) ರಾಜ್ಯದ ಬೀಗದ ಕೈಗಳು ಸಭೆಯ ಬಾಗಿಲನ್ನು ತೆರೆಯಲು ಉಪಯೇಗಿಸಲ್ಪಟ್ಟವು (ಮತ್ತಾಯ 16:19; ನೋಡಿರಿ ಅಪೊಸ್ತಲರ ಕೃತ್ಯಗಳು 2:47; KJV).

(4) ಬಾಪ್ತಿಸ್ಮವು ಪಾಪಿಯನ್ನು ರಾಜ್ಯದೊಳಗೆ ಹಾಕುತ್ತದೆ, ಮತ್ತು ಬಾಪ್ತಿಸ್ಮವು ಪಾಪಿಯನ್ನು ಸಭೆಯೊಳಗೆ ಹಾಕುತ್ತದೆ (ಯೋಹಾನ 3:5; 1 ಕೊರಿಂಥ 12:13).

(5) ಕರ್ತನ ಮೇಜ ರಾಜ್ಯದಲ್ಲಿ ಇರುವದೆಂದು ಹೇಳಲ್ಪಟ್ಟಿದೆ; ಅದೇ ಸಮಯದಲ್ಲಿ ಕರ್ತನ ಭೋಜನಕ್ಕೆ ಸಭೆಯಲ್ಲಿ ಮಹತ್ವದ ಪಾತ್ರವಿದೆ (ಲೂಕ 22:29, 30; 1 ಕೊರಿಂಥ 10:16).

(6) ದೇವರ ರಾಜ್ಯವು ನಾಶಪಡಿಸಲ್ಪಡದಂಥದ್ದಾಗಿದೆ, ಮತ್ತು ಸಭೆಯು ನಾಶಪಡಿಸಲ್ಪಡದಂಥದಾಗಿದೆ (ಇಬ್ರಿಯ 12:28; ಎಫೆಸ 3:20, 21).

### ಒಂದು ಭವಿಷ್ಯದ ಸಭೆ

ಒಂದು ನಿಶ್ಚಿತವಾದ ಭಾನುವಾರದ ವರೆಗೆ, (ಯೆಹೂದ್ಯರಿಂದ "ಪಂಚಾಶತ್ತಮ ದಿನ" ಎಂದು ಕರೆಯಲ್ಪಟ್ಟಿತು), ಕ್ರಿ.ಶ. 30ರಲ್ಲಿ, ಯೇಸುವಿನ ದಿವಾರೋಹಣದ ನಂತರ ಏಳು ದಿನಗಳ ವರೆಗೆ, ಸಭೆ ಇಲ್ಲವೇ ರಾಜ್ಯವು ಭವಿಷ್ಯವಾಗಿತ್ತು. ಆ ವಿಶೇಷ ಘಟನೆಗಳುಳ್ಳ ಕರ್ತನ ದಿನದ ಮೊದಲು, ರಾಜ್ಯದ, ಸಭೆಯ ಆಧಾರ ವಿಷಯಗಳು ಮುಂದಕ್ಕೆ ತೋರಿಸಿದವು (ಮುಂದಿನ ಚಾರ್ಟ್ ನೋಡಿರಿ).

### ಶಕ್ತಿಗುಂದಿದ ಒಂದು ಸಭೆಯಲ್ಲ

ಯೇಸುವಿನ ದಿವಾರೋಹಣದ ನಂತರದ ಹತ್ತು ದಿನಗಳ ನಂತರದ ನಿಶ್ಚಿತವಾದ ಭಾನುವಾರಕ್ಕಿಂತ ಮೊದಲು ಸಭೆಯ ಜನ್ಮದಿನವಿದ್ದರೆ, ಆಗ ಅದು ಒಂದು ಶಕ್ತಿಗುಂದಿದ, ಪ್ರಯೋಜನವಿಲ್ಲದ ಸಭೆಯಾಗಿರುತ್ತಿತ್ತು. ಇದು ಸತ್ಯವಾಗಿರುತ್ತದೆ ಯಾಕಂದರೆ ಆ ನಿರ್ದಿಷ್ಟವಾದ ಕರ್ತನ ದಿನದ ಮೊದಲು, ಸಭೆಯು ಹೀಗಿರಬಹುದಿತ್ತು:

(1) ಕೇವಲ ಯೆಹೂದ್ಯರದಾಗಿರುತ್ತಿತ್ತು (ಮತ್ತಾಯ 10:5, 6; ಮೊದಲ ಅನ್ಯರು ಅಪೊಸ್ತಲರ ಕೃತ್ಯಗಳು 10ರಲ್ಲಿ ಕ್ರೈಸ್ತರಾದರು)
(2) ಆತ್ಮನಿಲ್ಲದ್ದು (ಯೋಹಾನ 7:39)
(3) ರಕ್ತವಿಲ್ಲದ್ದು (ಅಪೊಸ್ತಲರ ಕೃತ್ಯಗಳು 20:28)
(4) ಶಿರಸ್ಸು ಇಲ್ಲದ್ದು (ಎಫೆಸ 1:22, 23; 5:23)
(5) ಕ್ರಿಸ್ತನಿಲ್ಲದ್ದು (ಮತ್ತಾಯ 16:16-20)
(6) ಬಲವಿಲ್ಲದ್ದು, ಏನೂ ಮಾಡದ ಸಭೆ (ನೋಡಿರಿ ಲೂಕ 24:49; ಅಪೊಸ್ತಲರ ಕೃತ್ಯಗಳು 1:4)

### ಒಂದು ಅಸ್ತಿತ್ವದಲ್ಲಿರುವ ಸಭೆ

ಪಂಚಾಶತ್ತಮ ದಿನವೆಂದು ಕರೆಯಲ್ಪಟ್ಟ ವಾರದ ಮೊದಲನೆಯ ಮಹತ್ವದ ದಿನದ ನಂತರ, ಸಭೆಗೆ ಉಲ್ಲೇಖಗಳು ಹಿಂದಕ್ಕೆ ತೋರಿಸುತ್ತವೆ (ಪುನಃ, ಮುಂದಿನ ಚಾರ್ಟನ್ನು ಪುಟ 47ನ್ನು ನೋಡಿರಿ) ಭವಿಷ್ಯದ ಮತ್ತು ಭೂತಕಾಲದ ಉಲ್ಲೇಖನಗಳು ಕ್ರಿ.ಶ. 30ರ ಪಂಚಾಶತ್ತಮದ ದಿನದ ಮೇಲೆ ಸುತ್ತುವರಿಯುತ್ತವೆ.

## ಪ್ರಾರಂಭದ ಸಮಯದ ಮಹತ್ವ

ಕ್ರಿ.ಶ. 30ರಲ್ಲಿ ಪಂಚಾಶತ್ತಮ ದಿನದಂದು ಬಲದೊಂದಿಗೆ ರಾಜ್ಯದ ಇಲ್ಲವೇ ಸಭೆಯ ಬರುವಿಕೆಯು (ಮಾರ್ಕ 9:1; ಲೂಕ 24:49) ಪರಿಶುದ್ಧ ಬರಹಗಳಲ್ಲಿ "ಪ್ರಾರಂಭದಂತೆ" ಸ್ಪಷ್ಟವಾಗಿ ಗುರುತಿಸಲ್ಪಟ್ಟಿದೆ (ಲೂಕ 24:47; ಅಪೊಸ್ತಲರ ಕೃತ್ಯಗಳು 11:15). ಜನ್ಮದಿನದ ನಿರ್ದಿಷ್ಟವಾದ ನೇಮಿಸುವಿಕೆಯು ಆ ದಿನದ ಮೊದಲಿನ ಯೇಸುವಿನ ಬೋಧನೆಗಳಲ್ಲಿ ಯಾವುದೂ ಈಗ ಬಂಧನಕಾರಿಯಾಗಿರುವದಿಲ್ಲ ಎಂದು ಅರ್ಥವಾಗುವದಿಲ್ಲ. ಅದಕ್ಕೆ ವಿರುದ್ಧವಾಗಿ, ಆ ಮಹಿಮೆಯುಳ್ಳ ಸಂಸ್ಥೆಯ ಸದಸ್ಯರಾಗಿರಲು ಆತನು ತನ್ನ ಶಿಷ್ಯರನ್ನು ಸಿದ್ಧಪಡಿಸುತ್ತಿರುವಂತೆ, ಆತನು ಹೇಳಿದ ಪ್ರತಿಯೊಂದೂ ಆತನ ಬರಲಿಕ್ಕಿದ್ದ ರಾಜ್ಯದ ನಿರೀಕ್ಷೆಯಲ್ಲಿ ಇತ್ತು. ಆತನ ಪರ್ವತದ ಮೇಲಿನ ಪ್ರಸಂಗದಲ್ಲಿಯ (ಮತ್ತಾಯ 5-7), ತಪ್ಪು ಮಾಡಿದವನೊಂದಿಗೆ ವ್ಯವಹರಿಸುವದರ ಬಗ್ಗೆ ಆತನ ಬೋಧನೆಯಲ್ಲಿಯ (ಮತ್ತಾಯ 18:15-17), ಮತ್ತು ಮದುವೆ ಮತ್ತು ವಿವಾಹ

ವಿಚ್ಛೇದನ ಪತ್ರದ ಬಗ್ಗೆ ಅತನ ಬೋಧನೆಯಲ್ಲಿಯ (ಮತ್ತಾಯ 19:3-9) ತತ್ವಗಳು, ಮತ್ತಾಯ 28:20ರಲ್ಲಿಯ ಆತನ ಸಾಮಾನ್ಯ ಕ್ರಮದಲ್ಲಿ ಒಳಗೊಂಡಿದ್ದವು. ಆತನು ಆಜ್ಞಾಪಿಸಿದ್ದೆಲ್ಲವನ್ನೂ ನಾವು ಅನುಸರಿಸಬೇಕು.

ಹಾಗಿದ್ದರೂ, ಯೇಸುವಿನ ಜೀವನದ ಭಾಗವಾಗಿದ್ದ ಕೆಲವು ಸಂಗತಿಗಳು ಕ್ರೈಸ್ತರಲ್ಲಿ ಇರಬಾರದು: ಯೆಹೂದಿ ಪಸ್ಕಾ ಹಬ್ಬ (ಮತ್ತಾಯ 26:18) ಮತ್ತು ಸಬ್ಬತ್ ಆಚರಣೆ (ಲೂಕ 4:16). ಚೀಲಗಳನ್ನಾಗಲಿ, ಕೆರಗಳನ್ನಾಗಲೀ ಒಯ್ಯಬಾರದು (ಲೂಕ 10:4), ಯೆಹೂದ್ಯರಿಗೆ ಮಾತ್ರ ಪ್ರಸಂಗಿಸಬೇಕು (ಮತ್ತಾಯ 10:5, 6), ಯೇಸುವು ಕ್ರಿಸ್ತನಾಗಿದ್ದಾನೆ ಎಂಬುದನ್ನು ಯಾರಿಗೂ ಹೇಳಬಾರದು (ಮತ್ತಾಯ 16:20) ಎಂದು ನಿರ್ದಿಷ್ಟವಾದ ಪರಿಸ್ಥಿತಿಗಾಗಿ ಹೇಳಿದ ನಿರ್ದೇಶನಗಳಿಗೆ ವಿಧೇಯರಾಗಬಾರದು.

ಅದರಂತೆ, ಯೇಸುವು ಶಿಷ್ಯರ ಪಾದಗಳನ್ನು ತೊಳೆದದ್ದು ಸಭೆಯ ನಿಯಮ ವಾಗಲು ಎಂದೂ ಉದ್ದೇಶಿಸಲ್ಪಟ್ಟಿರಲಿಲ್ಲ. ಸಭೆಯು ಸ್ಥಾಪಿಸಲ್ಪಡುವದಕ್ಕಿಂತ ಮೊದಲು (ಆದಿಕಾಂಡ 18:4; ಲೂಕ 7:44) ಮತ್ತು ಅನಂತರದಲ್ಲಿ (1 ತಿಮೊಥೆ 5:10), ಪಾದ ತೊಳೆಯುವಂಥದ್ದು ಮನೆಯಲ್ಲಿ ಅತಿಥಿ ಸತ್ಕಾರದ ಕಾರ್ಯದಂತೆ ರೂಢಿಯಲ್ಲಿತ್ತು. ಅದೆಂದೂ ಸಭೆಯ ನಿಯಮವಾಗಿರಲಿಲ್ಲ.

ಯೇಸುವಿನ ವೈಯಕ್ತಿಕ ಸೇವೆಯ ದಿನಗಳಲ್ಲಿ, ತನಗೆ ಮನಸ್ಸಿಗೆ ಬಂದ ಯಾವುದೇ ಮಾತುಗಳಲ್ಲಿ ಪಾಪಗಳನ್ನು ಕ್ಷಮಿಸಲು ಬಲವುಳ್ಳವನಾಗಿದ್ದನು (ಮಾರ್ಕ 2:10). ಶಿಲುಬೆಯ ಮೇಲಿನ ಕಳ್ಳನು ಬಾಪ್ತಿಸ್ಮ ಹೊಂದದೇ ರಕ್ಷಿಸಲ್ಪಟ್ಟ ಸಾಧ್ಯತೆಯಿದೆ. ಆದರೆ ಅದೇ ಕರ್ತನು ಕಳ್ಳನಿಗೆ ಆದರಣೆಯ ಮಾತುಗಳನ್ನು ಕೊಟ್ಟಾತನು, ಅನಂತರ, ಎಲ್ಲಾ ಜನರು ಬಾಪ್ತಿಸ್ಮ ಹೊಂದಬೇಕೆಂದು ಆಜ್ಞಾಪಿಸಿದನು (ಮಾರ್ಕ 16:15, 16). ಎಲ್ಲಾ ಜನರು ಪಾಪಗಳ ಪರಿಹಾರಕ್ಕಾಗಿ ಬಾಪ್ತಿಸ್ಮ ಹೊಂದಬೇಕು ಎಂಬ ನಿಯಮವು ಮೊದಲು ಜನರಿಗೆ ಸಭೆಯ ಜನನದ ದಿನದಂದು ಕೊಡಲ್ಪಟ್ಟಿತು. ಬುದ್ಧಿವಂತನಾದ ಮನುಷ್ಯನು ರಕ್ಷಿಸಲ್ಪಡುವದಕ್ಕಾಗಿ ಸಭೆಯ ಜನನದ ಮೊದಲು ನೋಡುವದಿಲ್ಲ. ಅವನು ಹಾಗೆ ಮಾಡಿದರೆ, ಕಳ್ಳನ ಉದಾಹರಣೆಯನ್ನು ಅನುಸರಿಸಬೇಕೋ ಇಲ್ಲವೇ ಹೇಬೆಲನ ಪ್ರಾಣಿ ಯಜ್ಞವನ್ನು ಅನುಸರಿಸಬೇಕೋ ಎಂಬುದನ್ನು ತಿಳಿಯದವನಾಗುತ್ತಾನೆ. ಅದಕ್ಕೆ ವಿರುದ್ಧವಾಗಿ, ಪಂಚಾಶತ್ತಮ ದಿನದ ಬಲದೊಂದಿಗೆ ಸಭೆಯ ಆರಂಭದ ಬಗ್ಗೆ ಸ್ಪಷ್ಟವಾದ ಬೋಧನೆಯು ತನ್ನ ಜೀವಿತದಲ್ಲಿ ಯೋಗ್ಯವಾಗಿ ಪರಿಣಾಮವಾಗುವಂತೆ ಬಿಡುವಾಗ, ಅವನು ರಕ್ಷಿಸಲ್ಪಡಲು ಏನು ಮಾಡಬೇಕೆಂಬುದನ್ನು ಅವನು ತಿಳಿದುಕೊಳ್ಳುವನು. ಪಂಚಾಶತ್ತಮ ದಿನದಂದು, ದೇವರ ವಾಕ್ಯವನ್ನು ಸಂತೋಷದಿಂದ ಸ್ವೀಕರಿಸಿದವರು ಪಂಚಾಶತ್ತಮ ದಿನಕ್ಕಿಂತ ಮೊದಲು ಕಳ್ಳನಿಗೆ ಸಂಭವಿಸಿದ್ದನ್ನು ಮೆಚ್ಚಿಕೊಂಡು ತಿರಸ್ಕರಿಸಲಿಲ್ಲ. ಅವರು ಮಾನಸಾಂತರ ಪಟ್ಟರು ಮತ್ತು ಬಾಪ್ತಿಸ್ಮ ಮಾಡಿಸಿಕೊಂಡರು (ಅಪೊಸ್ತಲರ ಕೃತ್ಯಗಳು 2:41).

ಇಂದು ಸಭೆಯಲ್ಲಿ ಶಿಶುಗಳ ಸದಸ್ಯತ್ವವು ಬೆಳೆಯುತ್ತಿರುವದಕ್ಕೆ ಕಾರಣಗಳಲ್ಲಿ ಒಂದು ಹೊಸ ಒಡಂಬಡಿಕೆಯ ಸಭೆಯ ಜನನದ ಮಹತ್ವವನ್ನು ತಿಳಿಯುವದರಲ್ಲಿ ಸೋತು ಹೋದದ್ದು. ಹಳೇ ಒಡಂಬಡಿಕೆಯ ಇಸ್ರಾಯೇಲಿನಲ್ಲಿ ಮತ್ತು ಯೇಸುವಿನ ಜೀವನ ಸಮಯದಲ್ಲಿ ಶಿಶುಗಳ ಸದಸ್ಯತ್ವವು ಸರಿಯಾಗಿದ್ದರೂ, ಯೇಸುವು ಸ್ಥಾಪಿಸಲು ಬಂದ ಸಭೆಯ ಮುಖ್ಯ ತತ್ವವು ಪ್ರತಿಯೊಬ್ಬ ಸದಸ್ಯನು "ಕರ್ತನನ್ನು ತಿಳಿಯುವುದು" ಆಗಿತ್ತು (ಇಬ್ರಿಯ 8:11). ಹೀಗೆ, ಸಭೆಯ ಜನನದ ದಿನದಂದು, ಪ್ರಸಂಗಿಸಿದ ವಾಕ್ಯವನ್ನು ಸ್ವೀಕರಿಸಲು ಸಾಕಷ್ಟು ದೊಡ್ಡವರಾಗಿದ್ದವರು ಮಾತ್ರವೇ ಬಾಪ್ತಿಸ್ಮ ಹೊಂದಿದರು.

ಧೂಪಸುಡುವುದು ಮತ್ತು ಯಾಂತ್ರಿಕ ಸಂಗೀತವು ಪಂಚಾಶತ್ತಮ ದಿನದ

ಮೊದಲು ಆರಾಧನೆಯಲ್ಲಿ ಉಪಯೋಗಿಸಲ್ಪಡುತ್ತಿದ್ದವು, ಆದರೆ ಕಟ್ಟುವದಕ್ಕೆ ಮತ್ತು ಬಿಚ್ಚುವದಕ್ಕೆ ಕ್ರಿಸ್ತನ ಬಲವುಳ್ಳ ಅಪೊಸ್ತಲರು (ಮತ್ತಾಯ 18:18) ಎರಡನ್ನೂ ಹೊಸ ಒಡಂಬಡಿಕೆಯಿಂದ ತೆಗೆದು ಹಾಕಿದರು. ಹೀಗಿದ್ದರೂ ಕೆಲವರು ಹೊಸ ಒಡಂಬಡಿಕೆಗೆ ಹಿಂದೇ ಹೋಗಿ, ಪಂಚಾಶತ್ತಮ ದಿನಕ್ಕಿಂತ ಮೊದಲಿದ್ದ ಧೂಪ ಸುಡುವದನ್ನೂ ಯಾಂತ್ರಿಕ ಸಂಗೀತವನ್ನೂ ಕ್ರೈಸ್ತ ಆರಾಧನೆಯಲ್ಲಿ ಅಳವಡಿಸಿಕೊಂಡಿದ್ದಾರೆ. ಕೆಲವರು ಧೂಪ ಸುಡುವದನ್ನು ತಿರಸ್ಕರಿಸುತ್ತಾರೆ ಆದರೆ ಯಾಂತ್ರಿಕ ಸಂಗೀತವನ್ನು ತಂದುಕೊಳ್ಳುತ್ತಾರೆ. ಕ್ರಿ.ಶ. 30ರ ಪಂಚಾಶತ್ತಮದ ಸಭೆಯ "ಪ್ರಾರಂಭದ" ಮಹತ್ವವನ್ನು ಅರ್ಥಮಾಡಿಕೊಂಡರೆ, ಈ ಸಮಸ್ಯೆಗಳು ತಾವೇ ಬಗೆಹರಿಸಲ್ಪಡುತ್ತವೆ.

ಕೆಲವರು ಸ್ನಾನಿಕನಾದ ಯೋಹಾನನ ಮಹಾ ಕಾರ್ಯಕ್ಕೆ ಹಿಂದೆ ಹೋಗಿ ಅವನನ್ನು ಅನುಸರಿಸಲು ಪ್ರಯತ್ನಿಸುತ್ತಾರೆ. ಯೋಹಾನನು ಎಷ್ಟೇ ದೊಡ್ಡವನಾಗಿದ್ದರೂ ಅವನ ಕಾರ್ಯವು ಪ್ರಾರಂಭಿಕವಾದದ್ದಾಗಿತ್ತು (ಲೂಕ 1:17; ಯೋಹಾನ 1:15). ಹೊಸ ಒಡಂಬಡಿಕೆಯ ಸಭೆಯ "ಪ್ರಾರಂಭವು" ಯೋಹಾನನ ತಲೆಯು ಕಡಿಯಲ್ಪಟ್ಟ ನಂತರ ಬಂದಿತು. ಆದುದರಿಂದ, ಒಬ್ಬ ಬುದ್ಧಿವಂತ ವ್ಯಕ್ತಿಯು, ದೇವರ ವಾಕ್ಯವನ್ನು ಸರಿಯಾಗಿ ವಿಭಾಗಿಸುವನು, ಸಭೆಯ ಜನನಕ್ಕಿಂತ ಮೊದಲು ಏನು ಸಂಭವಿಸಿತು ಮತ್ತು ಅನಂತರದಲ್ಲಿ ಏನು ಸಂಭವಿಸಿತು ಎಂಬುದರ ಮಧ್ಯದಲ್ಲಿಯ ತೀಕ್ಷಣವಾದ ಭಿನ್ನತೆಯನ್ನು ಗಮನಿಸುವನು.

ಹಾಗೆಯೇ, ಬುದ್ಧಿವಂತನಾದವನು, ಹಳೇ ಒಡಂಬಡಿಕೆಯ ಸಬ್ಬತ್ತನ್ನು ಕುರಿತು ಯೋಚಿಸುವನು, ಉದಾಹರಣೆಗಾಗಿ, "ಅದನ್ನು ಬೈಬಲಿನಲ್ಲಿ ನಾನು ಕಂಡುಕೊಳ್ಳುತ್ತೇನೆ" ಎಂದು ಹೇಳುತ್ತ ಕುರುಡನಾಗಿ ಸ್ವೀಕರಿಸುವದಿಲ್ಲ. ಅದರ ಬದಲು, ಅದನ್ನು ಬೈಬಲಿನಲ್ಲಿ *ಎಲ್ಲಿ* ಕಂಡುಕೊಳ್ಳಬಹುದು ಎಂಬುದನ್ನು ಪರೀಕ್ಷಿಸುವನು. ಪಂಚಾಶತ್ತಮದ ದಿನದ *ನಂತರ*, ದೇವರ ಸಭೆಯು ಸ್ವೀಕರಿಸುವದನ್ನು ಅವನು ಕಂಡುಕೊಂಡರೆ, ಆಗ ಅವನೂ ಸ್ವೀಕರಿಸುವನು. ಹಾಗಿದ್ದರೂ, ಒಮ್ಮೆ ದೇವರು ಅದನ್ನು ಒಪ್ಪಿಕೊಂಡಿದ್ದರೂ, ಅದು ಪಂಚಾಶತ್ತಮ ದಿನದ *ನಂತರ* ಸಭೆಯ ಭಾಗವಾಗಿರಲಿಲ್ಲ ಎಂದು ಕಂಡುಕೊಂಡರೆ (1 ಕೊರಿಂಥ 7:11; ಕೊಲೊಸ್ಸೆ 2:14-17), ಆಗ ಅವನು ಆ ಉದಾಹರಣೆಯನ್ನು ಅನುಸರಿಸುವನು. ತನ್ನ ಕೃತ್ಯಗಳಿಗೆ ಮಾರ್ಗದರ್ಶನ ಮಾಡಲು ಕ್ರೈಸ್ತತ್ವದ ಪ್ರಾರಂಭಿಸುವಿಕೆಯ ಮಹತ್ವವನ್ನು ಒಪ್ಪಿಕೊಳ್ಳುವನು.

## ಮುಕ್ತಾಯ

ಹೊಸ ಒಡಂಬಡಿಕೆಯ ಸಭೆಯು ಯಾವಾಗ ಅಸ್ತಿತ್ವದಲ್ಲಿ ಬಂದಿತು ಎಂಬುದನ್ನು ಒಬ್ಬನು ಸ್ಪಷ್ಟವಾಗಿ ತಿಳಿದುಕೊಳ್ಳುವಾಗ ಅನೇಕ ಗಲಿಬಿಲಿಗೊಳಿಸುವ ಧಾರ್ಮಿಕ ಪ್ರಶ್ನೆಗಳು ತಾವೇ ಬಗೆಹರಿಸಲ್ಪಡುವವು. ಸತ್ಯದ ವಾಕ್ಯವನ್ನು ಸರಿಯಾಗಿ ಕೈಕೊಳ್ಳುವದರಲ್ಲಿ ಇದು ಮಹತ್ವದ ಬೀಗದ ಕೈ ಆಗಿರುವುದು (2 ತಿಮೊಥೆ 2:15).

---

ಟಿಪ್ಪಣಿ

[1]ದಿನಾಂಕಗಳು ಭಿನ್ನವಾಗಿರುತ್ತವೆ, ಕ್ರಿಸ್ತನ ಜನನಕ್ಕಾಗಿ ಸ್ವೀಕರಿಸಲ್ಪಟ್ಟ ದಿನಾಂಕದ ಮೇಲೆ ಇವು ಅವಲಂಭಿಸಿರುತ್ತವೆ.

© 2009 Truth for Today

## ಯಾವಾಗ ಸಭೆಯು ಪ್ರಾರಂಭವಾಯಿತು?

| | |
|---|---|
| C. 600 B.C. | ದಾನಿಯೇಲ 2:44:<br>ದಾನಿಯೇಲನು "ರಾಜ್ಯದ" ಬಗ್ಗೆ ಪ್ರವಾದಿಸಿದನು |
| A.D. 27 | ಮಾರ್ಕ 1:15:<br>ದೇವರ ರಾಜ್ಯವು "ಹತ್ತಿರವಾಗಿದೆ"<br>ಎಂದು ಯೋಹಾನ ಹೇಳಿದನು |
| A.D. 28 | ಮತ್ತಾಯ 6:10:<br>"ನಿನ್ನ ರಾಜ್ಯವು ಬರಲಿ" … ಯೇಸು ಹೇಳಿದನು |
| A.D. 29 | ಮತ್ತಾಯ 16:18; ಮಾರ್ಕ 9:1:<br>ತನ್ನ ಸಭೆಯನ್ನು ಕಟ್ಟುವದನ್ನು ಯೇಸು<br>ವಾಗ್ದಾನ ಮಾಡಿದನು: ಕೇಳುಗರಲ್ಲಿ<br>ಕೆಲವರು ಅದನ್ನು ನೋಡಲು ಜೀವಿಸಿರುವರು |
| A.D. 30 | ಅಪೊಸ್ತಲರ ಕೃತ್ಯಗಳು 1:8:<br>ಉತ್ಥಾನವಾದ ಯೇಸುವು ಅಪೊಸ್ತಲರಿಗೆ<br>ಕಾದುಕೊಂಡಿರಲು ಹೇಳಿದ್ದು |
| A.D. 30 | ಅಪೊಸ್ತಲರ ಕೃತ್ಯಗಳು 2:1-41:<br>**ಪಂಚಾಶತ್ತಮ ದಿನ** |
| A.D. 30 | ಅಪೊಸ್ತಲರ ಕೃತ್ಯಗಳು 2:47:<br>ಮಾರ್ಪಟ್ಟವರು "ಅವರಿಗೆ" ಸೇರಿಸಲ್ಪಟ್ಟರು<br>("ಸಭೆ"; KJV) |
| A.D. 40 | ಅಪೊಸ್ತಲರ ಕೃತ್ಯಗಳು 8:1-4:<br>ಸಭೆಯು ಹಿಂಸಿಸಲ್ಪಟ್ಟದ್ದು |
| A.D. 45 | ಅಪೊಸ್ತಲರ ಕೃತ್ಯಗಳು 14:23:<br>ಪ್ರತಿಯೊಂದು ಸಭೆಯಲ್ಲಿ<br>ಹಿರಿಯರು ನೇಮಿಸಲ್ಪಟ್ಟದ್ದು |
| A.D. 65 | 1 ತಿಮೊಥೆ 3:15:<br>ಸ್ಥಾಪಿಸಲ್ಪಟ್ಟ ಸಭೆ |
| A.D. 96.[1] | ಪ್ರಕಟನೆ 1:5, 6; 2:1:<br>ಸ್ಥಾಪಿಸಲ್ಪಟ್ಟ ಸಭೆಗಳು |

**ಪರಿಶುದ್ಧ ಬರಹಗಳು ಮುಂದಕ್ಕೆ ತೋರಿಸುವುದು** →

← **ಪರಿಶುದ್ಧ ಬರಹಗಳು ಹಿಂದಕ್ಕೆ ತೋರಿಸುವುದು ಸಭೆಯ ಪ್ರಾರಂಭಕ್ಕೆ**



© 2009 Truth for Today